ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಚಿಡಿ/1631/2021
ಮಂಡನಾಧಿಕಾರಿಗಳ ಶಾಖೆ, ಎಆರ್ಇ-18

ಬಹುಮಹಡಿಗಳ ಕಟ್ಟಡ,
ಡಾ: ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 01/07/2022.
05

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ಎಂ. ಗಿರಿಜೇಶ್ ತಂದೆ ಲೇಟ್ ಮುನಿಯಪ್ಪ, ನಿರೀಕ್ಷಕರು, ಕಾನೂನು ಮಾಪನಶಾಸ್ತ್ರ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ. ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

1) ಚಿಕ್ಕಬಳ್ಳಾಪುರ ಜಿಲ್ಲೆ, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ಎಂ. ಗಿರಿಜೇಶ್ ತಂದೆ ಲೇಟ್ ಮುನಿಯಪ್ಪ, ನಿರೀಕ್ಷಕರು, ಕಾನೂನು ಮಾಪನಶಾಸ್ತ್ರ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರಾಗಿರುತ್ತಾರೆ. (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ). ಶ್ರೀ ಮೋತಿರಾಮ್ ತಂದೆ ಲೇಟ್ ತುಳಸಿರಾಮ್, ಅಂಬಿಕಾ ಜ್ಯೂವಲರಿ ಅಂಗಡಿ ಮಾಲೀಕರು, ಮಂಚೇನಹಳ್ಳಿ ಗ್ರಾಮ, ಗೌರಿಬಿದನೂರು ತಾಲ್ಲೂಕು ಚಿಕ್ಕಬಳ್ಳಾಪುರ ಜಿಲ್ಲೆ. (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಎದುರುದಾರರನ್ನು ಭೇಟಿ ಮಾಡಿದಾಗ ದೂರುದಾರರ ಕೆಲಸ ಮಾಡಿಕೊಡಲು ಲಂಚದ ಹಣಕ್ಕೆ ಬೇಡಿಕೆ ಇಟ್ಟು ದುರ್ನಡತೆ ತೋರಿಸಿರುತ್ತಾರೆ ಎಂದು ವರದಿ ಸಲ್ಲಿಸಿದ ಮೇರೆಗೆ, ದಾಖಲೆಗಳನ್ನು ಪರಿಶೀಲಿಸಿದಾಗ, ಎದುರುದಾರರು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7 (2) ರನ್ವಯ ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2) **ಪ್ರಕರಣದ ಸಂಕ್ಷಿಪ್ತ ಸಾರಾಂಶ:** ದೂರುದಾರರು ಸುಮಾರು 12 ವರ್ಷಗಳಿಂದ ಗೌರಿಬಿದನೂರು ತಾಲ್ಲೂಕು ಮಂಚೇನಹಳ್ಳಿ ಗ್ರಾಮದಲ್ಲಿ ಅಂಬಿಕಾ ಜ್ಯೂವಲರ್ಸ್ ಮತ್ತು ಗಿರವಿ ಅಂಗಡಿಯನ್ನು ಇಟ್ಟುಕೊಂಡಿರುತ್ತಾರೆ. ದೂರುದಾರರ ಅಂಗಡಿಯಲ್ಲಿ ಬಂಗಾರವನ್ನು ತೂಕ ಮಾಡುವ 300 ಗ್ರಾಂ ಅಳತೆಯ ಎಲೆಕ್ಟ್ರಾನಿಕ್ ತೂಕದ ಯಂತ್ರ ಮತ್ತು ಕೈನಿಂದ ಅಳತೆ ಮಾಡುವ 300 ಗ್ರಾಂ ತೂಕದ ಹಳೆಯ ಚಿಕ್ಕ ತಕ್ಕಡಿ ಇರುತ್ತದೆ. ಎಲೆಕ್ಟ್ರಾನಿಕ್ ಯಂತ್ರವನ್ನು ಪ್ರತಿವರ್ಷ ಹಾಗೂ ಕೈಯಿಂದ ಅಳತೆಯ ತಕ್ಕಡಿಯನ್ನು ಎರಡು ವರ್ಷಕ್ಕೊಮ್ಮೆ ಚಿಕಬಳ್ಳಾಪುರದಲ್ಲಿರುವ ತೂಕ ಮತ್ತು ಅಳತೆಯ ಅಧಿಕಾರಿಗಳಿಂದ ನವೀಕರಣ ಮಾಡಿಸಿಕೊಳ್ಳುತ್ತಾ ಇರುತ್ತಾರೆ. ದಿನಾಂಕ 03/08/2017 ರಂದು ದೂರುದಾರರ ಅಂಗಡಿಗೆ ತೂಕ ಮತ್ತು ಅಳತೆ ಇಲಾಖೆಯ ಅಧಿಕಾರಿಯಾದ ಎದುರುದಾರರು ಬಂದು ಅಂಗಡಿಯಲ್ಲಿ ದೂರುದಾರರು ಬಳಸುತ್ತಿರುವ 300 ಗ್ರಾಂ ತೂಕದ ಸಾಮರ್ಥ್ಯವುಳ್ಳ ಎಲೆಕ್ಟ್ರಾನಿಕ್ ತೂಕದ ಯಂತ್ರ ಹಾಗೂ ಕೈಯಿಂದ ತೂಕ ಮಾಡುವ 300 ಗ್ರಾಂ ಸಾಮರ್ಥ್ಯವುಳ್ಳ

ಚಿಕ್ಕ ತಕ್ಕಡಿಯನ್ನು ತೆಗೆದುಕೊಂಡು ರೂ. 4200/-ಗಳನ್ನು ಪಾವತಿಸಿ ನವೀಕರಣ ಮಾಡಿಸಿಕೊಂಡು ಎರಡೂ ತಕ್ಕಡಿಗಳನ್ನು ತೆಗೆದುಕೊಂಡು ಹೋಗುವಂತೆ ತಿಳಿಸಿ ಚಿಕ್ಕಬಳ್ಳಾಪುರಕ್ಕೆ ತೆಗೆದುಕೊಂಡು ಹೋಗಿರುತ್ತಾರೆ. ಇದಾದ ನಂತರ ದೂರುದಾರರು ಹಲವಾರು ಬಾರಿ ಎದುರುದಾರರ ಕಛೇರಿಗೆ ಹೋಗಿರುತ್ತಾರೆ. ಆದರೆ ಎದುರುದಾರರು ದೂರುದಾರರಿಗೆ ಭೇಟಿಯಾಗಿರುವುದಿಲ್ಲ. ದಿ: 03/11/2017 ರಂದು ಬೆಳಗ್ಗೆ ದೂರುದಾರರು ಎದುರುದಾರರ ಕಛೇರಿಗೆ ಹೋದಾಗ ಎದುರುದಾರರು ಕಛೇರಿಯಲ್ಲಿದ್ದುದ್ದನ್ನು ನೋಡಿ ತೂಕದ ಯಂತ್ರಗಳನ್ನು ನವೀಕರಿಸಲು ಕೇಳಿದಾಗ ರೂ. 4200/- ಗಳ ಫೀಸನ್ನು ನೀಡಬೇಕೆಂದು ತಿಳಿಸಿರುತ್ತಾರೆ. ಆಗ ದೂರುದಾರರ ಬಳಿ ರೂ. 2,200/- ಮಾತ್ರ ಇದ್ದು ಅವುಗಳನ್ನು ನೀಡಿದಾಗ ಎದುರುದಾರರು ಉಳಿದ ರೂ. 2,000/- ಲಂಚದ ಹಣವನ್ನು ಕೊಟ್ಟು ತೂಕದ ಯಂತ್ರಗಳನ್ನು ತೆಗೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ದಿ: 18/11/2017 ರಂದು ಬೆಳಗ್ಗೆ ಸುಮಾರು 10-45 ಘಂಟೆ ಸಮಯದಲ್ಲಿ ಎದುರುದಾರರು ತಮ್ಮ ಮೊಬೈಲ್‌ನಿಂದ ದೂರುದಾರರ ಮೊಬೈಲಿಗೆ ಕರೆ ಮಾಡಿ ಉಳಿದ 2,000/- ರೂ.ಗಳನ್ನು ನೀಡಿ ತೂಕದ ಯಂತ್ರಗಳನ್ನು ತೆಗೆದುಕೊಂಡು ಹೋಗುವಂತೆ ತಿಳಿಸಿರುತ್ತಾರೆ. ಎದುರುದಾರರು ಕರೆ ಮಾಡಿದ ಕರೆಯನ್ನು ದೂರುದಾರರು ತಮ್ಮ ಮೊಬೈಲ್ ಫೋನಿನಲ್ಲಿ ವಾಯ್ಸ್ ರೆಕಾರ್ಡ್ ಮಾಡಿಕೊಂಡಿರುತ್ತಾರೆ.

3) ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೇ ಇದ್ದುದರಿಂದ, ದಿನಾಂಕ 25/11/2017 ರಂದು ಮಧ್ಯಾಹ್ನ 03-30 ಘಂಟೆಗೆ ಭ್ರಷ್ಟಾಚಾರ ನಿಗ್ರಹ ದಳ ಚಿಕ್ಕಬಳ್ಳಾಪುರ ಪೊಲೀಸ್ ಠಾಣೆಗೆ ಹಾಜರಾಗಿ ತನಿಖಾಧಿಕಾರಿಯ ಮುಂದೆ ದೂರು ನೀಡಿದಾಗ ಸದರಿ ಪೊಲೀಸ್ ಠಾಣೆಯಲ್ಲಿ ಮೊ. ಸಂ. 07/2017 ಪಿ.ಸಿ. ಕಾಯಿದೆ ಕಲಂ 7 ರಡಿ ಎದುರುದಾರರ ವಿರುದ್ಧ ಪ್ರಥಮ ವರ್ತಮಾನ ವರದಿ ದಾಖಲಾಗಿರುತ್ತದೆ.

4) ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ ಶ್ರೀ ವಿ. ನಟೇಶಮೂರ್ತಿ ಬಿನ್ ಜಿ.ವೆಂಕಟೇಶಪ್ಪ ಮತ್ತು ಶ್ರೀ ಬಿ.ವಿ. ಹನುಮಂತರಾಯಪ್ಪ ಬಿನ್ ಲೇಟ್ ವೆಂಕಟಸ್ವಾಮಿ ಇವರನ್ನು ಬರಮಾಡಿಕೊಂಡಿದ್ದು, ಅವರುಗಳ ಪರಿಚಯ ಮಾಡಿಕೊಂಡು ಹಾಗೂ ದೂರುದಾರರಿಗೆ ಪರಿಚಯ ಮಾಡಿಸಿ ದೂರಿನ ಪ್ರತಿಯನ್ನು ಪಂಚರುಗಳಿಗೆ ತನಿಖಾಧಿಕಾರಿಗಳು ನೀಡಿ ಓದಿಕೊಳ್ಳಲು ತಿಳಿಸಿರುತ್ತಾರೆ. ಪಂಚ-1 ರವರನ್ನು ತನಿಖಾಧಿಕಾರಿಯವರು ನೆರಳು ಸಾಕ್ಷಿಯನ್ನಾಗಿ ನೇಮಿಸಿರುತ್ತಾರೆ. ತನಿಖಾಧಿಕಾರಿಯವರು ದೂರುದಾರರಿಂದ ಅವರ ಮೊಬೈಲ್‌ನ್ನು ಪಡೆದುಕೊಂಡು ಅದರಲ್ಲಿ ರೆಕಾರ್ಡ್ ಆಗಿದ್ದ ಆಡಿಯೋ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಮೊಬೈಲ್ ಫೋನಿನಲ್ಲಿ ಮೆಮೊರಿ ಕಾರ್ಡ್ ಇರುವುದಿಲ್ಲ. ಆದರೆ ವಾಯ್ಸ್ ರೆಕಾರ್ಡ್ ಫೋನ್ ಮೆಮೊರಿಯಲ್ಲಿ ರೆಕಾರ್ಡ ಆಗಿದ್ದ ಫೈಲ್‌ಗೆ ಯಾವುದೇ ಲೋಪ ಬಾರದಂತೆ ಕಂಪ್ಯೂಟರ್ ಮೂಲಕ ಎರಡು ಖಾಲಿ ಸಿಡಿಗಳಿಗೆ ಪರಿವರ್ತನೆ ಮಾಡಿ ಅದನ್ನು ಅಮಾನತ್ತು ಪಡಿಸಿಕೊಂಡಿರುತ್ತಾರೆ. ಎದುರುದಾರರು ದೂರುದಾರರ ಬಳಿ ಲಂಚವಾಗಿ ಕೇಳಿದ್ದ ರೂ. 2,000/- ಗಳು ಅಂದರೆ ರೂ.500/- ಮುಖಬೆಲೆಯ 2 ನೋಟುಗಳು ಹಾಗೂ ರೂ.100 ಮುಖಬೆಲೆಯ 10 ನೋಟುಗಳನ್ನು ದೂರುದಾರರು ತನಿಖಾಧಿಕಾರಿಯವರ ಮುಂದೆ ಹಾಜರಪಡಿಸಿರುತ್ತಾರೆ. ಸದರಿ ನೋಟುಗಳ ಎರಡು

ದೂರುದಾರರು ತನಿಖಾಧಿಕಾರಿಯವರ ಮುಂದೆ ಹಾಜರಪಡಿಸಿರುತ್ತಾರೆ. ಸದರಿ ನೋಟುಗಳ ಎರಡು ಬದಿಗಳಿಗೆ ತನಿಖಾಧಿಕಾರಿಯವರು ತಮ್ಮ ಸಿಬ್ಬಂದಿಯವರ ಮುಖಾಂತರ ಫಿನಾಪ್ತಲಿನ್ ಪುಡಿಯನ್ನು ತೆಳುವಾಗಿ ಸವರಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆಯಂತೆ ನೆರಳು ಸಾಕ್ಷಿಯಾದ ಪಂಚ-1 ರವರು ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ಎಣಿಸಿ ವಿವರಗಳನ್ನು ಹೇಳಿದಾಗ ಪಂಚ-2 ರವರು ಒಂದು ಹಾಳೆಯಲ್ಲಿ ಬರೆದಿಟ್ಟುಕೊಂಡಿರುತ್ತಾರೆ. ಫಿನಾಪ್ತಲಿನ್ ಪುಡಿಯನ್ನು ಸವರಿದ ನೋಟುಗಳನ್ನು ಪಂಚ-1 ರವರು ದೂರುದಾರರ ಅಂಗಶೋಧನೆ ಮಾಡಿ ಎದುರುದಾರರಿಗೆ ತೊಂದರೆಯುಂಟು ಮಾಡುವ ಯಾವುದೇ ವಸ್ತು ಇಲ್ಲವೆಂದು ಖಾತ್ರಿ ಪಡಿಸಿಕೊಂಡು ದೂರುದಾರರ ಶರ್ಟಿನ್ ಎಡಜೇಬಿನಲ್ಲಿಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಪಂಚ-1 ರವರು ತಮ್ಮ ಎರಡು ಕೈಬೆರಳುಗಳನ್ನು ಬಟ್ಟಲಿನಲ್ಲಿದ್ದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆಯುವಂತೆ ತನಿಖಾಧಿಕಾರಿಗಳು ಹೇಳಿದಾಗ ಪಂಚ-1 ರವರು ತಮ್ಮ ಎರಡು ಕೈಬೆರಳುಗಳನ್ನು ದ್ರಾವಣದಲ್ಲಿ ಅದ್ದಿ ತೊಳೆದುಕೊಂಡಾಗ ದ್ರಾವಣವು ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ದೂರುದಾರರು ಎದುರುದಾರರ ಬಳಿಗೆ ಹೋದಾಗ ಎದುರುದಾರರು ಲಂಚದ ಹಣಕ್ಕೆ ಬೇಡಿಕೆಯಿಟ್ಟಾಗ ಅವರಿಗೆ ಈ ಫಿನಾಪ್ತಲಿನ್ ಪುಡಿಯನ್ನು ಸವರಿರುವ ನೋಟುಗಳನ್ನೇ ಕೊಡಬೇಕೆಂದು ಮತ್ತು ಎದುರುದಾರರು ಹಣವನ್ನು ಸ್ವೀಕರಿಸಿದ ನಂತರ ಎದುರುದಾರರಿಗೆ ಗೊತ್ತಾಗದಂತೆ ತಮ್ಮ ಎಡಗೈನಿಂದ ತಲೆಯನ್ನು ಸವರಿಕೊಳ್ಳುವುದರ ಮೂಲಕ ಟ್ರ್ಯಾಪ್ ತಂಡಕ್ಕೆ ಸಿಗ್ನಲ್‌ನ್ನು ನೀಡುವಂತೆ ತನಿಖಾಧಿಕಾರಿಯವರು ದೂರುದಾರರಿಗೆ ಸೂಚನೆಯನ್ನು ಕೊಟ್ಟಿರುತ್ತಾರೆ. ತನಿಖಾಧಿಕಾರಿಯವರು ನೆರಳು ಸಾಕ್ಷಿಯಾದ ಪಂಚ-1 ರವರಿಗೆ ದೂರುದಾರರನ್ನು ಹಿಂಬಾಲಿಸಿಕೊಂಡು ಹೋಗಿ ಸಂದರ್ಭಕ್ಕೆ ಅನುಸಾರವಾಗಿ ದೂರುದಾರರು ಮತ್ತು ಎದುರುದಾರರ ಮಧ್ಯೆ ನಡೆಯುವ ವಿದ್ಯಮಾನ್ಯಗಳನ್ನು ಗಮನಿಸುವುದಲ್ಲದೇ ಅವರ ಮಧ್ಯೆ ನಡೆಯುವ ಸಂಭಾಷಣೆಯನ್ನು ಕೇಳಿಸಿಕೊಂಡು ಎದುರುದಾರರು ದೂರುದಾರರಿಂದ ಹಣ ಪಡೆದ ನಂತರ ದೂರುದಾರರಿಗೆ ಸಿಗ್ನಲ್ ಕೊಡಲು ಸಾಧ್ಯವಾಗದಿದ್ದಲ್ಲಿ ತಮ್ಮ ಎಡಗೈನಿಂದ ತಲೆ ಸವರಿಕೊಳ್ಳುವ ಮೂಲಕ ಸಿಗ್ನಲ್ ಕೊಡುವಂತೆ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರು ಎಲ್ಲಿಗೆ ಹಣ ತೆಗೆದುಕೊಂಡು ಬರುವಂತೆ ಹೇಳಿದ್ದಾರೆಂದು ಕೇಳಿದಾಗ ದೂರುದಾರರು ತನ್ನನ್ನು ತಾವು ಕೆಲಸ ಮಾಡುವ ತೂಕ ಮತ್ತು ಅಳತೆ ಇಲಾಖೆಯ ಕಛೇರಿಗೆ ಬರುವಂತೆ ತಿಳಿಸಿದ್ದಾರೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ತಮ್ಮ ಠಾಣೆಯಲ್ಲಿದ್ದ ಸೋನಿ ವಾಯ್ಸ್ ರೆಕಾರ್ಡ್‌ನ್ನು ತೆಗೆದುಕೊಂಡು ಅದನ್ನು ಪರಿಶೀಲಿಸಿ ಅದರಲ್ಲಿ ಯಾವುದೇ ಫೈಲ್‌ಗಳು ಇಲ್ಲದಿರುವ ಬಗ್ಗೆ ಖಚಿತಪಡಿಸಿಕೊಂಡ ನಂತರ ದೂರುದಾರರಿಗೆ ಸುಸ್ಥಿತಿಯಲ್ಲಿರುವ ಸದರಿ ಸೋನಿ ವಾಯ್ಸ್ ರೆಕಾರ್ಡ್‌ನ್ನು ನೀಡಿ ಎದುರುದಾರರಿಗೆ ಹಣ ಕೊಡಲು ಹೋದಾಗ ದೂರುದಾರರು ಮತ್ತು ಎದುರುದಾರರ ಮಧ್ಯೆ ನಡೆಯುವ ಧ್ವನಿ ಸಂಭಾಷಣೆಯನ್ನು ಮುದ್ರಿಸಿಕೊಳ್ಳುವಂತೆ ತಿಳುವಳಿಕೆ ಕೊಟ್ಟು ವಿವರಿಸಿ ತೋರಿಸಿರುತ್ತಾರೆ. ನಂತರ ಎಲ್ಲರೂ ತಮ್ಮ ಕೈಬೆರಳುಗಳನ್ನು ಸೋಪು ಮತ್ತು ನೀರಿನಿಂದ ಶುಭ್ರವಾಗಿ ತೊಳೆದುಕೊಂಡಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಸಿ ದಿ: 25/11/2017 ರಂದು ಸಂಜೆ 04-15 ಘಂಟೆಯಿಂದ

04-45 ಘಂಟೆಯವರೆಗೆ ಚಿಕ್ಕಬಳ್ಳಾಪುರ ಎಸಿಬಿ ಕಛೇರಿಯಲ್ಲಿ ಪ್ರಾಯೋಗಿಕ ಪಂಚನಾಮೆಯನ್ನು ಮಾಡಿರುತ್ತಾರೆ.

5) ತನಿಖಾಧಿಕಾರಿಗಳು ಜಪ್ತಿ ಪೂರ್ವದ ಪಂಚನಾಮೆಯ ಎಲ್ಲ ಔಚಿತ್ಯಪೂರ್ವ ನಡವಳಿಕೆಗಳನ್ನು ನಡೆಸಿದ ನಂತರ ದೂರುದಾರರು ಪಂಚ ಸಾಕ್ಷಿಗಳು, ಸಿಬ್ಬಂಧಿಯವರೊಂದಿಗೆ ಎರಡು ಸರ್ಕಾರಿ ವಾಹನಗಳಲ್ಲಿ ಹೊರಟು ಚಿಕ್ಕಬಳ್ಳಾಪುರ ಎಪಿಎಂಸಿ ಯಾರ್ಡ್‌ನಲ್ಲಿರುವ ಸಹಾಯಕ ನಿಯಂತ್ರಕರ ಕಛೇರಿ, ಕಾನೂನು ಮಾಪನ ಶಾಸ್ತ್ರ ಇಲಾಖೆ ಚಿಕ್ಕಬಳ್ಳಾಪುರರವರ ಕಛೇರಿಯಿಂದ ಸುಮಾರು 200 ಮೀಟರ್ ದೂರದಲ್ಲಿ ವಾಹನಗಳನ್ನು ಮರೆಯಾಗಿ ನಿಲ್ಲಿಸಿ, ತನಿಖಾಧಿಕಾರಿಗಳು ದೂರುದಾರರು ಹಾಗೂ ನೆರಳು ಸಾಕ್ಷಿಯಾದ ಶ್ರೀ ವಿ. ನಟೇಶ ಮೂರ್ತಿರವರುಗಳಿಗೆ ಪ್ರಾಯೋಗಿಕ ಪಂಚನಾಮೆಯ ಸಮಯದಲ್ಲಿ ನೀಡಿದ ಸೂಚನೆ ಹಾಗೂ ತಿಳುವಳಿಕೆಗಳನ್ನು ಮತ್ತೊಮ್ಮೆ ನೆನಪಿಸಿ ಎದುರುದಾರರನ್ನು ಭೇಟಿಯಾಗಲು ಎದುರುದಾರರ ಕಛೇರಿಗೆ ಕಳುಹಿಸಿಕೊಟ್ಟಿರುತ್ತಾರೆ. ಅವರಿಬ್ಬರೂ ಎದುರುದಾರರು ಕರ್ತವ್ಯ ನಿರ್ವಹಿಸುತ್ತಿದ್ದ ಕಛೇರಿಯ ಒಳಗಡೆ ಬಂದಾಗ ಎದುರುದಾರರ ಬೇಡಿಕೆಯಂತೆ ದೂರುದಾರರ ತಮ್ಮ ಶರ್ಟ್ ಎಡಜೇಬಿನಲ್ಲಿದ್ದ 2,000/- ರೂ. ಪಿನಾಪ್ತಲಿನ್ ಪುಡಿ ಲೇಪಿತ ಹಣವನ್ನು ನೀಡಲು ಹೋದಾಗ ಎದುರುದಾರರು ಸದರಿ ಲಂಚದ ಹಣವನ್ನು ತಮ್ಮ ಕಛೇರಿಯಲ್ಲಿ ತಕ್ಕಡಿ ಯಂತ್ರಗಳನ್ನು ದುರಸ್ತಿ ಮಾಡುವ ಸಿ.ಎನ್. ಅಶ್ವತ್ಥಪ್ಪ ರವರಿಗೆ ನೀಡಲು ಸೂಚಿಸಿರುತ್ತಾರೆ. ಅದರಂತೆ ದೂರುದಾರರು ಲಂಚದ ಹಣವನ್ನು ಅವರಿಗೆ ನೀಡಿದಾಗ ಅವರು ಸದರಿ ಲಂಚದ ಹಣವನ್ನು ತಮ್ಮ ಬಲಗೈಯಿಂದ ಸ್ವೀಕರಿಸಿ ತಮ್ಮ ಎರಡೂ ಕೈಗಳಿಂದ ನೋಟುಗಳನ್ನು ಎಣಿಸಿ ಬಲಗೈನಿಂದ ತಮ್ಮ ಪ್ಯಾಂಟಿನ ಬಲ ಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ಅವರಿಗೆ ನೀಡಿದ ಸೂಚನೆಯಂತೆ ದೂರುದಾರರು ತಮ್ಮ ತಲೆಯನ್ನು ಎಡಗೈನಿಂದ ಸವರಿಕೊಳ್ಳುವುದರ ಮೂಲಕ ನಿಗದಿತ ಸಿಗ್ನಲ್ ನೀಡಿರುತ್ತಾರೆ. ಆಗ ತನಿಖಾಧಿಕಾರಿಯವರು ಅಲ್ಲಿಗೆ ಬಂದು ಲಂಚದ ಹಣದ ಸಮೇತ ಎದುರುದಾರರನ್ನು ಮತ್ತು ಸಿ.ಎನ್.ಅಶ್ವತ್ಥಪ್ಪ ರವರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಯವರು ಪಂಚರ ಸಮಕ್ಷಮ ಸದರಿ ಲಂಚದ ಹಣವಾದ 2,000/- ರೂ.ಗಳನ್ನು ಸಿ.ಎನ್.ಅಶ್ವತ್ಥಪ್ಪರವರಿಂದ ಅಮಾನತ್ತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಸಿ.ಎನ್. ಅಶ್ವತ್ಥಪ್ಪರವರ ಬಲಗೈ ಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ಅದೇ ರೀತಿ ಅವರ ಎಡಗೈ ಬೆರಳುಗಳನ್ನು ಇನ್ನೊಂದು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಗಳು ಸಿ.ಎನ್. ಅಶ್ವತ್ಥಪ್ಪರವರಿಗೆ ಬದಲೀ ಪ್ಯಾಂಟಿನ ವ್ಯವಸ್ಥೆಯನ್ನು ಮಾಡಿ ಅವರ ಪ್ಯಾಂಟನ್ನು ಬಿಚ್ಚಿಸಿಕೊಂಡು ಅವರ ಪ್ಯಾಂಟಿನ ಬಲ ಭಾಗದ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ಸದರಿ ದ್ರಾವಣಗಳನ್ನು ಹಾಗೂ ಪ್ಯಾಂಟನ್ನು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು

ಟ್ರಾಪ್ ಪಂಚನಾಮೆಯ ಕಾಲಕ್ಕೆ ದೂರುದಾರರಿಗೆ ನೀಡಿದ ಸೋನಿ ವಾಯ್ಸ್ ರೆಕಾರ್ಡ್‌ರನ್ನು ಪಡೆದುಕೊಂಡು ಅದನ್ನು ಲ್ಯಾಪ್ ಟಾಪ್‌ಗೆ ಹಾಕಿ ಅದರಲ್ಲಿ ರೆಕಾರ್ಡ್ ಆಗಿದ್ದ ಧ್ವನಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಿ ಲ್ಯಾಪ್ ಟಾಪ್ ಮೂಲಕ ಎರಡು ಸಿ ಡಿ.ಗಳಿಗೆ ವರ್ಗಾಯಿಸಿಕೊಂಡು ಪಂಚರ ಸಮಕ್ಷಮ ಅಮಾನತ್‌ಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಯವರು ಎದುರುದಾರರಿಗೆ ತಮ್ಮ ಹೇಳಿಕೆ ಏನಾದರೂ ಇದ್ದರೆ ಬರೆದುಕೊಡಿ ಎಂದು ಕೇಳಿದಾಗ ಅವರು ಹೇಳಿಕೆಯನ್ನು ಬರೆದುಕೊಟ್ಟಿದ್ದು, ಅದರಲ್ಲಿ ಅವರು "ದಿ: 03-08-2017 ರಂದು MOTIRAM S/O M/S AMBIKA JEWELLERS MANCHENAHALLI GAURIBIDAHUR TALUK ಇವರ ಅಂಗಡಿಯಲ್ಲಿ 300g electronic balance & 200g B/s cell B ತಕ್ಕಡಿಗಳನ್ನು ಕಾನೂನು ಮಾಪನ ಕಾಯ್ದೆ ನಿಯಮ ಅಡಿ ಮೇಲ್ಕಂಡ ವಿಳಾಸದಲ್ಲಿ ಅಂಗಡಿಯಲ್ಲಿ ಮೊಕದ್ದಮೆಯನ್ನು ಹೂಡಲಾಯಿತು. ಸದರಿ violantion (1) failed to produce the weight or measure for verification within the prescribed period. ನಂತರ ದಿ: 17-11-2017 ರಂದು ಕಛೇರಿಗೆ ಅಂಬಿಕಾ ಜ್ಯೂವೆಲರ್ಸ್ ಮಂಚೇನ ಹಳ್ಳಿ ಮಾಲೀಕರು ಕಛೇರಿಗೆ ಬಂದು ನ್ಯಾತಪ್ಪ ಮೆ॥ ಮಂಜುನಾಥ ಮೆಟ್ರಿಕ್ ವರ್ಕ್ ಚಿಕ್ಕಬಳ್ಳಾಪುರ ಇವರಿಗೆ ಹಣ ನನ್ನ ಹತ್ತಿರ ಈಗ ಇಲ್ಲ ಎಂದು ಹೇಳಿ ಬೆಳ್ಳಿಗೆ 9.00 ಗಂಟೆಗೆ ಹೇಳಿರುತ್ತಾರೆ. ನಂತರ ಕಛೇರಿಗೆ ಬಂದು ನನ್ನ ಸದರಿ ಕೇಸನ್ನು ನಾನು compounding ಮಾಡಿಕೊಡುತ್ತೇನೆಂದು ಹೇಳಿರುತ್ತಾರೆ. ಅಂಬಿಕಾ ಜ್ಯೂವೆಲರ್ಸ್ ಮಾಲೀಕರು ಹೇಳಿದರು ಅದರಂತೆ ದಿ: ನಾನು 17/11/2017 ರಂದು MR ನಂ. 171638097 ನಲ್ಲಿ compounding ಮಾಡಿ ಹಣ ರಸೀದಿ ರೂ. 500/- Laptop ನಲ್ಲ money receipt ಬಂದಿರುತ್ತದೆ. ಆನಂತರ ಸದರಿ ತಕ್ಕಡಿಗೆ ತೂಕದಲ್ಲಿ ವ್ಯತ್ಯಾಸ ಇರುವುದ್ದರಿಂದ ಹಾಗೂ ಮೆ॥ ನ್ಯಾತಪ್ಪ ಮಾಲೀಕರು ಮಂಜುನಾಥ ಮೆಟ್ರಿಕ ವರ್ಕ್ ಇವರು ದುರಸ್ಥಿ ಮಾಡಿ ಎರಡು ತಕ್ಕಡಿಗಳಿಗೆ ದುರಸ್ಥಿ ಹಣವನ್ನು ಬಿಲ್ ನಂ. 84 ದಿ: 03/11/2017 ರಂದು ನೀಡಿರುತ್ತಾರೆ. ಸದರಿ ದುರಸ್ಥಿ ಬಿಲ್‌ನ ಹಣ ರೂ.1,600/- ಇರುತ್ತದೆ. ಆ ನಂತರ ಸದರಿ ತಕ್ಕಡಿಗೆ ದಿ: 17-11-2017 ರ ಸತ್ಯಾಪನೆ ಮತ್ತು ಮುದ್ರಿ ಶುಲ್ಕ 1) money receipt ನಂ 171638096 ಹಣ ರೂ. 600/- 2) ಹಾಗೂ ಎರಡನ್ನೆಲ್ಲ money receipt ನಂ. 171638097 ಹಣ ರೂ. 100/- computer Laptop ನಲ್ಲ generate ಆಗಿ ಬಂದಿರುತ್ತದೆ. ಆ ಸಮಯದಲ್ಲಿ ಮಾಲೀಕರು ನನ್ನ ಹತ್ತಿರ ಹಣವಿಲ್ಲ ವೆಂದು ಹೇಳಿರುತ್ತಾರೆ. ಆಗ ದುರಸ್ಥಿದಾರರಾದ ಮೆ॥ ಮಂಜುನಾಥ ಮೆಟ್ರಿಕ್ ವರ್ಕ್ ಮಾಲೀಕರಾದ ನ್ಯಾತಪ್ಪ ಇವರು ಸರ್ಕಾರಿ ಶುಲ್ಕವನ್ನು ನಾನು ಕಟ್ಟುತ್ತೇನೆ. ಬೆಳಿಗ್ಗೆ ಹಣ ನೀಡುತ್ತೇನೆಂದು ಹೇಳಿರುತ್ತಾರೆ. ಆ ಸಮಯದಲ್ಲಿ ನಾನು scale ನ್ನು ನೀಡಿರುವುದಿಲ್ಲ. ನಂತರ ದಿ:

18/11/2017 ರಂದು ಬೆಳ್ಳಿಗೆ ಮೆ॥ ಮಂಜುನಾಥ ಮೆಟ್ರಿಕ್ ವರ್ಕ ಮಾಲೀಕರಾದ ನ್ಯಾತಪ್ಪ ಇವರು ಕಛೇರಿಗೆ ಬಂದು ಸರ್ಕಾರಿ ಶುಲ್ಕವನ್ನು ನೀಡಿರುತ್ತಾರೆ. ನಂತರ ಸದರಿ ಅಂಗಡಿಯ ಸ್ಕೇಲನ್ನು ನ್ಯಾತಪ್ಪ ಇವರಿಗೆ ನೀಡಲು ಹೋದಾಗ ಸರ್ ನಾನು ಈಗ ಊರಿಗೆ ಹೋಗುತ್ತಿದ್ದೇನೆ. ಊರಿಂದ ಬಂದ ತಕ್ಷಣ ನಾನು ಅಂಬಿಕಾ ಜ್ಯೂವೆಲರ್ಸ್ ತಕ್ಕಡಿಗಳನ್ನು ನಾನೇ ಪಡೆಯುತ್ತೇನೆ. ನಾನು ಅಂಬಿಕಾ ಜ್ಯೂವೆಲರ್ಸ್ ಮಾಲೀಕರು ನನಗೆ ತಕ್ಕಡಿಗಳನ್ನು ನನ್ನ ಅಂಗಡಿಗೆ ನೀಡಿ ಎಂದು ಹೇಳಿದ್ದಾರೆ. ಅವರು ಚಿಕ್ಕಬಳ್ಳಾಪುರದಲ್ಲಿ ನನಗೆ ಸಿಕ್ಕಿದ್ದರು ಎಂದು ನ್ಯಾತಪ್ಪ ನನಗೆ ಹೇಳಿದರೂ ಆ ನಂತರ ನಾನು ಸುಮಾರು ಸಲ ನ್ಯಾತಪ್ಪನಿಗೆ AMBIKA JEWELLERS ತಕ್ಕಡಿ ಕಛೇರಿ ಎಲ್ಲಿದೆ ಹಾಗೂ ಸದರಿ ತಕ್ಕಡಿಗೆ ಸಂಬಂಧಿಸಿದ ಕಛೇರಿಯಲ್ಲಿ ಹಣ ಸಂದಾಯ ರಸೀದಿ ಇರುತ್ತದೆ ಎಂದು ಹೇಳಿದೆ. ಆಗ ನ್ಯಾತಪ್ಪರವರು ನನಗೆ ಹಣ ನೀಡಲಿಲ್ಲ ನಾನೇ scale ಹಾಗೂ receipt ನ್ನು ತೆಗೆದುಕೊಂಡು ಹೋಗುತ್ತೇನೆಂದು ನ್ಯಾತಪ್ಪ ಹೇಳಿರುತ್ತಾರೆ. ಆ ನಂತರ ನ್ಯಾತಪ್ಪರವರೇ scale ಹಾಗೂ ಹಣ ರಸೀದಿಗಳನ್ನು ಕಛೇರಿಯಲ್ಲಿಟ್ಟಿರುತ್ತಾರೆ. ನಂತರ AMBIKA JEWELLERS ಮಂಚೇನಹಳ್ಳಿ ಮಾಲೀಕರು ನಾನು ನಿಮಗೆ ಹಣ ನೀಡಬೇಕು ಎಂದು ಹೇಳಿರುತ್ತಾರೆ. ನಾನು ಮಾಲೀಕರಿಗೆ ನೀವು ನಮ್ಮ ಕಛೇರಿಗೆ ಬಂದು ನ್ಯಾತಪ್ಪ ಬರುತ್ತಾರೆ. ನ್ಯಾತಪ್ಪ ರವರು ನನಗೆ ನೀಡಿರುತ್ತಾರೆ. ಎಂದು ಚಿಕ್ಕಬಳ್ಳಾಪುರದಲ್ಲಿ (ಖುದ್ದು ನನಗೆ ಸಿಕ್ಕಿ) ನಿಮ್ಮ JEWELLERS ಹಣವನ್ನು ನ್ಯಾತಪ್ಪರವರು ನನಗೆ ಈಗಾಗಲೇ ಸತ್ಯಾಪನೆ ಶುಲ್ಕ ಹಣ ಅಭಿಸಂದಾನ ದಂಡ ಶುಲ್ಕವನ್ನು ನೀಡಿರುತ್ತಾರೆಂದು ತಿಳಿಸಿರುತ್ತಾರೆ. AMBIKA JEWELLERS ಮಾಲೀಕರಿಗೆ ಈಗ ನಿಮ್ಮ ತಕ್ಕಡಿ e=1mg ಆಗಬೇಕು ಆದರೆ, e=10 mg ಇರುತ್ತದೆ. ನೀವು ಸದರಿ ತಕ್ಕಡಿಯನ್ನು ಬದಲಾಯಿಸಿ ಕಾನೂನು ಮಾಪನ ಕಾಯ್ದೆ 1 ನಿಯಮ change ಆಗಿದೆ ಎಂದು ತಿಳಿಸಿದೆ ಅದಕ್ಕೆ ಅವರು ಕೋಪ ಮಾಡಿಕೊಂಡು ಹೋಗಿರುತ್ತಾರೆ. ದಿ: 25-11-2017 ರಂದು ಸಂಜೆ ಸುಮಾರು 5.30 ರಿಂದ 6.00 ಗಂಟೆಗೆ ಕಛೇರಿ ಕೆಲಸವನ್ನು ನಿರ್ವಹಿಸಿರುತ್ತೇನೆ. ಆ ಸಮಯದಲ್ಲಿ ಕೇಂದ್ರ ಕಛೇರಿಯಿಂದ ಪೊಟ್ಟಣ ಸಾಮಗ್ರಿ ನಿಯಮದ ಮೇಲೆ ದಿ: 23-11-2017 ರಿಂದ 28-11-2017 ರವರೆಗೆ ಜಿಎಸ್‌ಟಿ ಪೊಟ್ಟಣಗಳ ಮೇಲೆ ಮೊಕದ್ದಮೆ ಹೂಡಬೇಕೆಂದು ಆದೇಶ ಮಾಡಿರುತ್ತಾರೆ. ಆ ಆದೇಶದ ಮೇರೆಗೆ ಮಹಾಲಕ್ಷ್ಮೀ ಸ್ಟೀಲ್ ಅಂಗಡಿಗೆ ತಪಾಸಣೆ ಹೋದಾಗ ಮಾಲೀಕರು ನನಗೆ ನಿಮ್ಮ ಕೇಂದ್ರ ಕಛೇರಿ ಆದೇಶವನ್ನು ತರಿಸಿ ಎಂದು ಕೇಳಿರುತ್ತಾರೆ. ಆಗ ನಾನು ಕಛೇರಿಗೆ ಹೇಳಿದೆ ಆ ಸಮಯದಲ್ಲಿ ಮೆ॥ ಮಹಾಲಕ್ಷ್ಮೀ ಸಿಲ್ಕ್ ಮಾಲೀಕರು ಹಾಗೂ 15 ಜನ ನಮ್ಮ ಕಛೇರಿಗೆ ಬಂದು ಕೇಂದ್ರ ಕಛೇರಿ ಆದೇಶ ಪ್ರತಿಯನ್ನು ಓದಿ ನಾವು ವ್ಯಾಪರಸ್ಥರು ನಿಮ್ಮ ಕಛೇರಿ/ನಿಮ್ಮ ಇಲಾಖೆ ನಿಯಮ/ಕಾನೂನುಗಳನ್ನು ತಿಳಿಸಿ ಎಂದು ಕೇಳಿರುತ್ತಾರೆ. ಆ ಸಮಯದಲ್ಲಿ ನನ್ನ ಕೊಠಡಿಯಲ್ಲಿ (Room) ನಲ್ಲಿ ನಾನು ಮಹಾಲಕ್ಷ್ಮೀ ಸಿಲ್ಕ್ ಮಾಲೀಕರು ಹಾಗೂ ಇನ್ನು 15 ಜನ ಒಟ್ಟು ವ್ಯಾಪಾರಿಗಳು ಮಾತನಾಡುತ್ತಾ ಕಛೇರಿಯಲ್ಲಿ

ಕುಳಿತಿರುತ್ತೇನೆ. ಆ ಸಮಯದಲ್ಲಿ ನನ್ನ ರೂಮಿಗೆ AMBIKA JEWELLERS ಮಾಲೀಕರು ಬಂದು ಹಣ ತೆಗೆದುಕೊಳ್ಳಿ ರೂ.2,000/- ಎಂದು ಹೇಳಿದರು ಆಗ ನಾನು ತುಂಬಾ ಜನ ಇದ್ದರಿಂದ ನಿಮ್ಮ ಹಣ ಸರ್ಕಾರಿ ಶುಲ್ಕವನ್ನು ನ್ಯಾತಪ್ಪ ಇವರು ಕಟ್ಟಿದ್ದಾರೆ, ಎರಡು ಸಾವಿರ ಎಂದು ಪದೇ ಪದೇ ಮಾಲೀಕರು M/s AMBIKA JEWELLERS ತೆಗೆದುಕೊಳ್ಳಿ ರೂ.2,000/- ಎಂದು ಹೇಳಿರುತ್ತಾರೆ. ಆಗ ಆ ಸಮಯದಲ್ಲಿ ನಾನು ನ್ಯಾತಪ್ಪ ಅವರಿಗೆ ಸರ್ಕಾರಿ ಶುಲ್ಕವನ್ನು ಈಗಾಗಲೇ ಸರ್ಕಾರಕ್ಕೆ ಕಟ್ಟಿದ್ದಾರೆ. ಸರ್ಕಾರಿ ಶುಲ್ಕವನ್ನು ಹಾಗೂ ದುರಸ್ಥಿ ಶುಲ್ಕವನ್ನು ಅಶ್ವತ್ಥಪ್ಪ ಅಥವಾ ನ್ಯಾತಪ್ಪನನ್ನು ನೀವು ಕೇಳಿ ಎಂದು ಹೇಳಿರುತ್ತೇನೆ. ಮತ್ತೆ AMBIKA JEWELLERS ಮಾಲೀಕರು ಪದೇ ಪದೇ ನನ್ನ ಹತ್ತಿರ ಬಂದು ರೂ.2,000/- ಹಣವನ್ನು ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ. ಆಗ ನಾನು ಸರ್ಕಾರಿ ಶುಲ್ಕವನ್ನು ನ್ಯಾತಪ್ಪ ನೀಡಿದ್ದಾರೆಂದು ಹೇಳಿದೆ. ಸರ್ಕಾರಿ ಶುಲ್ಕ ಸರ್ಕಾರಿ ಶುಲ್ಕ ಎಂದು ಪದೇ ಪದೇ ಹೇಳಿದೇನು ಜನರು ಕಛೇರಿಯಲ್ಲಿ ತುಂಬಾ ಇದ್ದ ಕಾರಣ ಆಗ AMBIKA JEWELLERS ಮಾಲೀಕರು ಹಣವನ್ನು ಅಶ್ವತ್ಥಪ್ಪನಿಗೆ ನೀಡಿರುತ್ತಾನೆ. ಆ ಸಮಯದಲ್ಲಿ ಎಸಿಬಿ ಕಛೇರಿ ಅಧಿಕಾರಿಗಳು ನಮ್ಮ ಕಛೇರಿಗೆ ಬಂದಿರುತ್ತಾರೆ. ಅಶ್ವತ್ಥಪ್ಪನ್ನು ಕರೆದುಕೊಂಡು ಬಂದಿರುತ್ತಾರೆ. ಆ ಸಮಯದಲ್ಲೂ ನನ್ನ Room ನಲ್ಲಿ 15 ಜನ ವರ್ತಕರು ನನ್ನ ಜೊತೆ ಪೊಟ್ಟಣಗಳ ಮೇಲೆ ನಿಮ್ಮ ಇಲಾಖೆ ಕಾನೂನು/ನಿಯಮಗಳನ್ನು ತಿಳಿಸಿ ಎಂದು ಚರ್ಚೆ ಮಾಡಿಕೊಂಡು ನಾವುಗಳು ಕುಳಿತುಕೊಂಡಿರುತ್ತೇವೆ. ಆಸಮಯದಲ್ಲಿ ಎಸಿಬಿ ಅಧಿಕಾರಿಗಳು ಅಶ್ವತ್ಥಪ್ಪನನ್ನು ಕರೆದುಕೊಂಡು ನಮ್ಮ Room ಗೆ ಬಂದಿರುತ್ತಾರೆ. ಆದರೆ, ನಾನು AMBIKA JEWELLER ಮಂಚೇನಹಳ್ಳಿ ಇವರ ಯಾವುದೇ ಕೆಲಸಗಳನ್ನು ನಮ್ಮ ಕಛೇರಿಯಲ್ಲಿ pending ಇರುವುದಿಲ್ಲ. ದಿ: 17-11-2017 ರಂದು ಅವರ ಕೆಲಸವನ್ನು ಮುಗಿಸಿರುತ್ತೇನೆ. ಹಾಗೂ ನ್ಯಾತಪ್ಪ ಇದರ bill ಗೆ AMBIKA JEWELLERS ಮಾಲೀಕರು ಸಹಿ ಹಾಕಿ ಕೊಟ್ಟಿರುತ್ತಾರೆ. ಒಟ್ಟು ಹಣದ ರಸೀದಿ ಈ ಕೆಳಕಂಡಂತೆ ಇರುತ್ತದೆ.

1) Compendig fees 500=00 MR No.171638094

2) Verification fees 600=00 MR No. 171638096

3) Verification fees 100=00 MR No. 171638097

Beam scale

4) M/s Manjunath 1600= No. 084

Metric Bill 2800=00

ಒಟ್ಟು ಎರಡು ಸಾವಿರದ ಎಂಟು ನೂರುಗಳು

ನಾನು ಯಾವುದೇ ಕಾರಣಕ್ಕೂ **AMBIKA JEWELLERS** ಮಾಲೀಕರಿಗೆ ಲಂಚದ ಹಣವನ್ನು ನೀಡಿ ಎಂದು ಕೇಳಿರುವುದಿಲ್ಲ ಹಾಗೂ ಹೇಳಿರುವುದಿಲ್ಲ. ನಾನು ಪದೇ ಪದೇ ಸರ್ಕಾರಿ ಶುಲ್ಕ ಎಂದೆ ಹೇಳಿರುತ್ತೇನೆ. ಆದರೆ, ಅಂಬಿಕಾ ಜ್ಯೂವೆಲರ್ಸ್ ಮಾಲೀಕರು ಪದೇ ಪದೇ ರೂ.2,000/- ಹಣವಿದೆ ತೆಗೆದುಕೊಳ್ಳಿ ಎಂದು ಹೇಳಿರುತ್ತಾರೆ ಬೇಕಾದರೆ ಒಟ್ಟು ಮಾಲೀಕರು 15 ಜನರುಗಳನ್ನು ವಿಚಾರಿಸಬಹುದು ಎಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆಂದು ಈ ಮೂಲಕ ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಾಗೂ ಸರ್ಕಾರಿ ಪಂಚರುದಾರರು ನನ್ನ **Room** ಗೆ ಬಂದಿರುವುದಿಲ್ಲವೆಂದು ತಮಗೆ ತಿಳಿಸಿರುತ್ತೇನೆ" ಎಂದು ತಮ್ಮ ಪ್ರತಿರಕ್ಷಣಾ ಹೇಳಿಕೆಯನ್ನು ಬರೆದುಕೊಟ್ಟಿರುತ್ತಾರೆ. ತನಿಖಾಧಿಕಾರಿಯವರು ಸಿ.ಎನ್.ಅಶ್ವತ್ಥಪ್ಪ ರವರಿಗೆ ನಿಮ್ಮ ಹೇಳಿಕೆ ಏನಾದರೂ ಇದ್ದರೆ ಬರೆದುಕೊಡಿ ಎಂದು ಕೇಳಿದಾಗ ಅವರು ತಮ್ಮ ಹೇಳಿಕೆಯಲ್ಲಿ "ನಾನು ಸಾಯಂಕಾಲ 4.30 ರಿಂದ ಆಫೀಸನಲ್ಲಿ ವಿ.ಸಿ ಹಾಕುವುದಕ್ಕೆ ಸಾಹೇಬರ್ ಹತ್ತಿರ ಬಂದಿದ್ದೆ ಅವರು ಬೇರೆಯವರ ವಿ.ಸಿ ಹಾಕಿಸುತ್ತಿದ್ದರೂ ಆಗ ಅವರಿಗಾಗಿ 5.00 ಗಂಟೆಯವರಿಗೆ ಕಾಯ್ದದೆ ಆಗ ಅಂಬಿಕಾ ಜ್ಯೂವೆಲರ್ಸ್ ಮಂಚೇನಹಳ್ಳಿ ಇವರು ಬಂದಿದ್ದರು ಅವರಿಂದ ರೂ.2,000/- ಹಣ ತೆಗೆದುಕೊಳ್ಳಿ ಎಂದು ನನಗೆ ಹೇಳಿರುವುದ್ದರಿಂದ ನಾನು ತೆಗೆದುಕೊಂಡಿರುತ್ತೇನೆಂದು ತಮ್ಮಲ್ಲಿ ತಿಳಿಸಿರುತ್ತೇನೆ" ಎಂದು ತಮ್ಮ ಪ್ರತಿರಕ್ಷಣಾ ಹೇಳಿಕೆಯನ್ನು ಬರೆದುಕೊಟ್ಟಿರುತ್ತಾರೆ. ಸದರಿಯವರ ಪ್ರತಿರಕ್ಷಣಾ ಹೇಳಿಕೆಗಳ ಬಗ್ಗೆ ದೂರುದಾರರು ಮತ್ತು ನೆರಳು ಸಾಕ್ಷಿದಾರರನ್ನು ತನಿಖಾಧಿಕಾರಿಯವರು ಕೇಳಿದಾಗ ಎದುರುದಾರರು ಹಾಗೂ ಸಿ.ಎನ್.ಅಶ್ವತ್ಥಪ್ಪ ರವರು ಬರೆದುಕೊಟ್ಟಿರುವ ಪ್ರತಿ ರಕ್ಷಣಾ ಹೇಳಿಕೆಗಳು ಸುಳ್ಳೆಂದು ಎದುರುದಾರರು ದೂರುದಾರರಿಂದ ಲಂಚದ ಹಣಕ್ಕಾಗಿ ಬೇಡಿಕೆಯಿಟ್ಟು ಪಡೆದಿರುತ್ತಾರೆಂದು ತಿಳಿಸಿರುತ್ತಾರೆ.

6) ಸದರಿ ಹಣದ ಬಗ್ಗೆ ತನಿಖಾಧಿಕಾರಿಯು ಎದುರುದಾರರಾದ ನಿಮ್ಮನ್ನು ವಿಚಾರಿಸಿದಾಗ ಸರಿಯಾದ, ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

7) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು, ಎದುರುದಾರರಾದ ನಿಮ್ಮ ಸತತವಾದ ದುರ್ನಡತೆಯನ್ನು ತೋರಿಸುತ್ತದೆ.

8) ಧ್ವನಿ ವಿಶ್ಲೇಷಣಾ ವರದಿಯಲ್ಲಿ ಮುದ್ರಿತ ಧ್ವನಿಯು ನಿಮ್ಮ ಧ್ವನಿಯೊಂದಿಗೆ ತಾಳೆಯಾಗಿರುವುದು ಧೃಢಪಟ್ಟಿರುತ್ತದೆ ಹಾಗೂ ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಫಿನಾಪ್ತಲಿನ್ ಅಂಶ ಇರುವುದು ಧೃಢಪಟ್ಟಿರುತ್ತದೆ.

9) ನಂತರ ಎದುರುದಾರರಿಗೆ ದಿನಾಂಕ 06/09/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿನಾಂಕ 05-04-2022 ರಂದು ಸಲ್ಲಿಸಿರುತ್ತಾರೆ. ಎದುರುದಾರರು ಸಲ್ಲಿಸಿದ ಸಮಜಾಯಿಷಿಗಳನ್ನು ಪರಿಶೀಲಿಸಲಾಗಿ ದೂರುದಾರರು ತನ್ನ ಮೇಲೆ ನೀಡಿದ ಚಿಕ್ಕಬಳ್ಳಾಪುರ ಭ್ರಷ್ಟಾಚಾರ ನಿಗ್ರಹ ಪೋಲೀಸ್ ಠಾಣೆ ಕ್ರೈನಂ. 07/2017 ರ ಪ್ರಕರಣವು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆಂದು ಹೇಳಿ ತನ್ನ ಮೇಲೆ ಯಾವುದೇ ಶಿಸ್ತು ಕ್ರಮವನ್ನು ಜರುಗಿಸಬಾರದೆಂದು ಹೇಳಿ ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ

ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

10) ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆ, ಧ್ವನಿ ವಿಶ್ಲೇಷಣಾ ವರದಿ, ರಾಸಾಯನಿಕ ತಜ್ಞರ ಪರೀಕ್ಷಾ ವರದಿ ಮತ್ತು ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೇ ಮಾಲುಗಳಲ್ಲಿ ಪಿನಾಪ್ತಲಿನ್ ಅಂಶ ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ಶ್ರೀ ಸಿ.ಎನ್ ಅಶ್ವತಪ್ಪ ತಂದೆ ನರಸಿಂಹಪ್ಪ ರವರ ಮುಖಾಂತರ ಲಂಚದ ಹಣಕ್ಕೆ ಬೇಡಿಕೆಯಿಟ್ಟ ರೂ.2,000/- ಲಂಚದ ಹಣವನ್ನು ದೂರುದಾರರಿಂದ ಪಡೆಯುವ ಮೂಲಕ ತಮ್ಮ ಕರ್ತವ್ಯದಲ್ಲಿ ನೀತಿ ನಿಷ್ಠೆಯನ್ನು ಪಾಲಿಸದೇ ಕರ್ತವ್ಯದಲ್ಲಿ ಶ್ರದ್ಧೆ ಹೊಂದಿರದೆ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 2021) ರ ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

11) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ಎಂ. ಗಿರಿಜೇಶ್ ತಂದೆ ಲೇಟ್ ಮುನಿಯಪ್ಪ, ನಿರೀಕ್ಷಕರು, ಕಾನೂನು ಮಾಪನಶಾಸ್ತ್ರ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ. ಇವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (3) ರನ್ವಯ ಪ್ರದತ್ತವಾದ ಅಧಿಕಾರದಡಿ, ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.

12) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12 (4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

05/7/22

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.